# ಕರ್ನಾಟಕ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 728 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ ( ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೇಂದ್ರ ಸರ್ಕಾರದ "ಅಜಾದಿ ಕಾ ಅಮೃತ್ ಮಹೋತ್ಸವ್ ಪ್ರಯುಕ್ತ ಏಕ್ ಭಾರತ್ ಶ್ರೇಷ್ಠ ಭಾರತ್" ಎಂಬ ಯೋಜನೆಯ ಕಾರ್ಯಕ್ರಮ ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಎಂದಿನಿಂದ ಜಾರಿಗೆ ಬಂದಿದೆ; | ಮಾರ್ಚ್ 12, 2021 ರಂದು, ಭಾರತ ದೇಶದ ಘನ ಪ್ರಧಾನ ಮಂತ್ರಿ ನರೇಂದ್ರ ಮೋದಿ ರವರು "ಆಜಾದಿ ಕಾ ಅಮೃತ್ ಮಹೋತ್ಸವ" ಕ್ಕೆ ಚಾಲನೆ ನೀಡಿದರು. ಅಂದಿನಿಂದ ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಜಾರಿಗೆ ತರಲಾಗಿದೆ. |
| (ಆ) | ಈ ಕಾರ್ಯಕ್ರಮದಡಿ ಇಲ್ಲಿಯ ತನಕ ರಾಜ್ಯದ ಎಷ್ಟು ವಿದ್ಯಾರ್ಥಿಗಳನ್ನು ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಕಳುಹಿಕೊಡಲಾಗಿದೆ ಮತ್ತು ಈ ಕಾರ್ಯಕ್ರಮಕ್ಕೆ ರಾಜ್ಯ ಮತ್ತು ಕೇಂದ್ರ ನೀಡಿರುವ ಅನುದಾನವೆಷ್ಟು; (ವಿವರ ನೀಡುವುದು) | ಈ ಕಾರ್ಯಕ್ರಮದಡಿ ಇಲ್ಲಿಯ ತನಕ ರಾಜ್ಯದ 50 ವಿದ್ಯಾರ್ಥಿಗಳನ್ನು ಹೊರ ರಾಜ್ಯಗಳಿಗೆ ಪ್ರವಾಸಕ್ಕೆ ಕಳುಹಿಸಲಾಗಿದೆ. 2022-23ನೇ ಸಾಲಿನಲ್ಲಿ ಪ್ರವಾಸ ಕೈಗೊಂಡ ವಿದ್ಯಾರ್ಥಿಗಳ ವಿವರ: |

| ಕ್ರಸಂ | ವಿದ್ಯಾರ್ಥಿಗಳ ವಿವರ | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | ಉನ್ನತ ಶಿಕ್ಷಣ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು | 25 |
| 2 | ಕೇಂದ್ರೀಯ ವಿದ್ಯಾಲಯ | 03 |
| 3 | ಜವಹರ್ ನವೋದಯ ವಿದ್ಯಾಲಯ | 03 |
| 4 | ರಾಜ್ಯ ಪಠ್ಯಕ್ರಮ | 19 |
| | ಒಟ್ಟು | **50** |

ಈ ಕಾರ್ಯಕ್ರಮಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಹಾಗೂ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್ ರವರ ಮಾರ್ಗಸೂಚನೆಯಂತೆ ಆರ್.ಎನ್.ಎಸ್.

| | | |
|---|---|---|
| | | ತಾಂತ್ರಿಕ ಸಂಸ್ಥೆ, ಬೆಂಗಳೂರು ರವರ ಸಹಕಾರದೊಂದಿಗೆ ಪ್ರವಾಸ ಕೈಗೊಳ್ಳಲಾಯಿತು. |
| (ಇ) | ಈ ಕಾರ್ಯಕ್ರಮದಡಿ ಹೊರ ರಾಜ್ಯಗಳಿಗೆ ಪ್ರವಾಸ ಹೋಗುವ ವಿದ್ಯಾರ್ಥಿಗಳಿಗೆ ಹಿಂದಿ ಭಾಷೆ ಮತ್ತು ತಂತ್ರಜ್ಞಾನ ತಿಳುವಳಿಕೆ ಇರುವ ವಿದ್ಯಾರ್ಥಿಗಳನ್ನು ಮಾತ್ರ ಆಯ್ಕೆ ಮಾಡಬೇಕೆಂಬ ಷರತ್ತು ವಿಧಿಸಲಾಗಿದೆಯೇ?<br>(ಸಂಪೂರ್ಣ ವಿವರ ನೀಡುವುದು) | ಷರತ್ತು ವಿಧಿಸಲಾಗಿರುವುದಿಲ್ಲ.<br><br>ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವಾಲಯ, ಭಾರತ ಸರ್ಕಾರ, ನವದೆಹಲಿಯವರು ವಿದ್ಯಾರ್ಥಿಗಳ ಆಯ್ಕೆಗೆ ಸೂಚಿಸಿದ ಮಾನದಂಡಗಳು.<br><br>• ವಿದ್ಯಾರ್ಥಿಗಳು ರಾಜ್ಯ ಪಠ್ಯಕ್ರಮ, ಕೇಂದ್ರ ಪಠ್ಯಕ್ರಮ, ಕೇಂದ್ರೀಯ ವಿದ್ಯಾಲಯ, ಜವಹರ್ ನವೋದಯ ವಿದ್ಯಾಲಯಗಳಲ್ಲಿ ಪ್ರಸ್ತುತ ವರ್ಷ 9 ರಿಂದ 12 ನೇ ತರಗತಿ ಓದುತ್ತಿರಬೇಕು.<br>• ಆಯ್ಕೆಯಾಗುವ 25 ವಿದ್ಯಾರ್ಥಿಗಳಲ್ಲಿ 3 ವಿದ್ಯಾರ್ಥಿಗಳು ಕೇಂದ್ರೀಯ ವಿದ್ಯಾಲಯದಿಂದ, 3 ವಿದ್ಯಾರ್ಥಿಗಳು ಜವಹರ್ ನವೋದಯ ವಿದ್ಯಾಲಯದಿಂದ, 19 ವಿದ್ಯಾರ್ಥಿಗಳು ರಾಜ್ಯ ಪಠ್ಯಕ್ರಮ, ಕೇಂದ್ರ ಪಠ್ಯಕ್ರಮ ಶಾಲೆಗಳಿಂದ ತೆಗೆದುಕೊಳ್ಳಬೇಕು.<br>• ಶೈಕ್ಷಣಿಕವಾಗಿ ಉತ್ತಮ ಪ್ರಗತಿ ಸಾಧಿಸಿರುವ , ಉತ್ತಮ ಹಾಜರಾತಿ, ಶಾಲಾ ಹಂತದಲ್ಲಿ ಏಕ್ ಭಾರತ್-ಶ್ರೇಷ್ಠ ಭಾರತ್ ಕಾರ್ಯಕ್ರಮದ ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವ ವಿದ್ಯಾರ್ಥಿಗಳಾಗಿರಬೇಕು.<br>• ನಾಯಕತ್ವ ಗುಣ ಹೊಂದಿರುವ ಹಾಗೂ ವಿಶೇಷ ಸಾಧನೆ ಮಾಡಿರುವ ವಿದ್ಯಾರ್ಥಿಗಳಾಗಿರಬೇಕು.<br>• ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಸಮಾನ ಅವಕಾಶ ನೀಡುವುದು.<br>• ದಿವ್ಯಾಂಗ (ಸಿ.ಡಬ್ಲ್ಯುಎಸ್.ಎನ್) ಮಕ್ಕಳನ್ನು ಪರಿಗಣಿಸುವುದು.<br>• ಮಾನವೀಯತೆ, ವ್ಯವಹಾರಿಕ ಹಾಗೂ STEM-(Science, Technology, Engineering and Math) ಜ್ಞಾನ, ಹೊಂದಿರುವ ವಿದ್ಯಾರ್ಥಿಗಳಾಗಿರಬೇಕು.<br>• ಸಾಮಾಜಿಕ ಜಾಲತಾಣಗಳ ಜ್ಞಾನ, ಬ್ಲಾಗಿಂಗ್ ಮಾಡಬಲ್ಲ, ವಿಡಿಯೋ ಮಾಡಬಲ್ಲ, ತಾಂತ್ರಿಕ ಜ್ಞಾನ ಹೊಂದಿರುವ ವಿದ್ಯಾರ್ಥಿಗಳಾಗಿರಬೇಕು |

- ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಅವಕಾಶ ನೀಡಬೇಕು. (ಪ.ಜಾ, ಪ.ಪಂ., ಓಬಿಸಿ, ಸಿ.ಡಬ್ಲ್ಯೂ.ಎಸ್.ಎನ್ ಹಾಗೂ ಇತರೆ)
- ಒಂದು ವೇಳೆ 10 ಅಥವಾ 12 ನೇ ವರ್ಗಗಳಲ್ಲಿ ಪರೀಕ್ಷೆ ನಡೆಯುತ್ತಿದ್ದಲ್ಲಿ ಉಳಿದ ವರ್ಗಗಳ ವಿದ್ಯಾರ್ಥಿಗಳನ್ನು ಪರಿಗಣಿಸುವುದು.
- ಪ್ರವಾಸಕ್ಕೆ ತೆರಳಲಿರುವ ವಿದ್ಯಾರ್ಥಿಗಳ ಪಾಲಕರಿಂದ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವಾಲಯ ನೀಡಿರುವ ಮುಚ್ಚಳಿಕೆ ಪತ್ರ ಪಡೆಯುವುದು.
- ವಿದ್ಯಾರ್ಥಿಗಳು ಕೋವಿಡ್-19 ಚುಚ್ಚುಮದ್ದು ಪಡೆದ ಬಗ್ಗೆ ಪ್ರಮಾಣ ಪತ್ರ ಪಡೆಯುವುದು.

ವಿದ್ಯಾರ್ಥಿಗಳ ಆಯ್ಕೆಯ ವಿವರ ( 9 -12)

| ಜಾತಿವಾರು ವಿದ್ಯಾರ್ಥಿಗಳ ಆಯ್ಕೆ | ಬಾಲಕ | ಬಾಲಕಿಯರು | ಒಟ್ಟು |
|---|---|---|---|
| ಪ ಜಾ | 1 | 1 | 2 |
| ಪ ಪಂ | 0 | 1 | 1 |
| ಇತರ ಹಿಂದುಳಿದ | 3 | 3 | 6 |
| ಸಾಮಾನ್ಯ | 3 | 3 | 6 |
| ಪ ಪೂ ಶಿ ಇಲಾಖೆ | 2 | 2 | 4 |
| ಕೇಂದ್ರೀಯ ವಿದ್ಯಾಲಯ | 2 | 1 | 3 |
| ಜವಹರ್ ನವೋದಯ ವಿದ್ಯಾಲಯ | 1 | 2 | 3 |
| ಒಟ್ಟು | 12 | 13 | 25 |

ಇಪಿ 264 ಎಂ.ಹೆಚ್.ಟಿ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು